ಇವಳ ಹಿಂದೆ ಒಂದು ಕಪ್ಪು ನಾಯಿ. ಇವರ ಮನೆಯವರೇ ಸಾಕಿರುವ ನಾಯಿ. ದೂರದಿಂದ ಕೇಳಿಬಂದ ನಾಯಿಯ ಕೂಗಿಗೆ ಪ್ರತಿಯಾಗಿ ಆ ಕಡೆ ದಿಕ್ಕಿಗೆ ಜೋರಾಗಿ ಬೊಗಳಿತು. ಮತ್ತೆ ಸುಮ್ಮನಾಯಿತು. ಅವಳು ಆ ಮಣ್ಣಿನ ಮುಚ್ಚಳವನ್ನು ಹಿಡಿದು ಹೊರಗೆ ನಡೆಯುತ್ತಿದ್ದಾಳೆ. ಅದರ ಹಿಂದೆ ಕಪ್ಪು ನಾಯಿ. ಜೊತೆಗೆ ಅವಳ ಅತ್ತೆ. ಮತ್ತು ಅವಳ ಅತ್ತೆಯ ಅತ್ತೆ. ಸುಮಾರು ಎಂಬತ್ತೈದು ವರ್ಷ. ಕಿವಿಯಲ್ಲಿನ ಓಲೆಗಳು ಕಿವಿಯನ್ನು ಎಷ್ಟು ಸಾಧ್ಯವೋ ಅಷ್ಟು ಕೆಳಗಡೆ ಜಗ್ಗಿಸಿಕೊಂಡು ಉಯ್ಯಾಲೆ ಆಡುತ್ತಿರುವಂತೆ ತೂಗುತ್ತಿವೆ. ಅವಳ ಹಣೆ, ಕೈಗಳ ಮೇಲಿನ ಹಚ್ಚೆ ತೊಗಲಿನ ಜೊತೆ ಬೆರೆತು ಅವೂ ಸುಕ್ಕುಗೊಂಡಿವೆ. ಕೋಲನ್ನು ಹಿಡಿದುಕೊಂಡು ನಡೆಯುತ್ತಿದ್ದಾಳೆ. ನಾಯಿ ದಾರಿಯಲ್ಲಿ ಒಂದು ಮರದ ಬುಡದ ಹತ್ತಿರ ಹೋಗಿ, ಕಾಲನ್ನು ಎತ್ತಿ ಮೂತ್ರ ಮಾಡಿ ಬಂದು ಮತ್ತೆ ಇವರ ಜೊತೆ ಸೇರಿತು. ಮೂವರು ಹೆಂಗಸರು ಮತ್ತು ನಾಯಿ ನಡೆಯುತ್ತಿದ್ದಾರೆ. ಮೌನ. ಮೌನ. ಕತ್ತಲಲ್ಲಿ ಅವರು ಕರಗಿ ನಡೆದುಕೊಂಡು ಹೋಗುತ್ತಿದ್ದಾರೆ. ಈಗ ಊರಾಚೆಯ ಕೆರೆಯ ಹತ್ತಿರ ಹೋದರು. ಅಜ್ಜಿ ಹೇಳಿದಳು, 'ಸುಕ್ಕಿ ಆರತಿನ ನಿಮ್ಮತ್ತೆ ಕೈಗೆ ಕೊಟ್ಟು, ಅವಳತಗಿರುವ ತಂಬಿಗೆಯಲ್ಲಿನ ನೀರನ್ನು ಇಸಕೊಂಡು, ಅದರೊಳಗಿನ ನೀರನ್ನು ಆ ಸಿಲೆಮ್ಯಾಕೆ ಉಗ್ಗು, ಆಮೇಕೆ ನೀರು ಬಿಟ್ಟುಕೊಂಡು ಅದುನ್ನ ಮೂರುಸುತ್ತು ಸುತ್ತು, ಸುತ್ತಿ ಆಮೇಕೆ ದೀಪದಾರತಿನ ಹಿಡಕೊಂಡು ಮೂರು ಸತಿ ಆ ಶಿಲೆಯ ಮುಖಕ್ಕೆ ಬೆಳಗಿ ಅದುನ್ನ ಕೆಳಗಿಟ್ಟು, ಅದರೊಳಗಿನ ತಮ್ಟುದುಂಡೆಗಳನ್ನ ಅದ್ರ ಪಾದುತ್ತಕೆ ಇಟ್ಟು ಹೂವುಗಳನ್ನ ಸುರ್ದು, ಕಾಯೊಡದು, ಊದ್ಗಡ್ಡಿ ಹಚ್ಚಿ ಬೆಳಗು. ಆಮ್ಯಾಕೆ ನೀನು ಹುಟ್ಟು ಬಟ್ಟೆಲಿ ಅದುನ್ನ ಮೂರು ಸಲ ಬಾಚಿ ತಬ್ಬಿಕೋ' ಎಂದಳು. ಪುರುಷಾಕೃತಿಯ ಬೆತ್ತಲೆಯ ಕಪ್ಪು ಶಿಲೆ. ಕೆರೆಯ ಎದುರಿಗೆ ಪೂರ್ವಾಭಿಮುಖವಾಗಿ ನಿಂತಿದೆ. 'ಅರೆ ಈ ಶಿಲೆಗೂ ನನಗೆ ಮಗು ಆಗುವುದಕ್ಕೂ ಏನು ಸಂಬಂಧ, ಅದೂ ಮೈ ಮೇಲೆ ಅರಿವೆನೂ ಇಲ್ದಂಗೆ!' ಈ ಕತ್ತಲಲ್ಲಿ ಎಲ್ಲಿಗಾದರೂ ಓಡಿಹೋಗಬೇಕೆನ್ನಿಸಿತು ಅವಳಿಗೆ. ಕಣ್ಣಲ್ಲಿ ನೀರೂ ಬಂದವು. ಎದೆಯಲ್ಲಿ ಬೆಂಕಿನೂ ಹತ್ತಿಕೊಂಡಿತು. 'ಅಜ್ಜಿ?' 'ಏನು?' 'ಪುರುಷುರೂ ಹಿಂಗೆ ಪೂಜೆ ಮಾಡ್ತಾರಾ, ಬೆತ್ತಲೆಲಿ?' ಈ ಮಾತಿಗೆ ಅವಳ ಅತ್ತೆ ಕಿಸಕ್ಕನೆ ನಕ್ಕಳು. ಅವಳು ಹಾಗೆ ನಕ್ಕದ್ದನ್ನು ಅಲ್ಲಿಯೇ ತನ್ನ ಹೊಳಪಾದ ನಾಲಗೆಯನ್ನು ಹೊರ ಚಾಚಿಕೊಂಡು ಕುಳಿತಿದ್ದ ನಾಯಿ ರಪ್ಪಂಥ ಅವಳ ಕಡೆ ತಿರುಗಿ ನೋಡಿತು. ಈ ಪ್ರಶ್ನೆಗೆ ಏನು ಉತ್ತರ ಕೊಡಲಾರದೆ, 'ಏನೇನೋ ಮಾತಾಡಬೇಡ, ನೀನೀಗ ಸುಮ್ಕೆ ಮಾಡು, ನಾನು ಹೇಳ್ದಂತೆ' ಎಂದಿತು ಅಜ್ಜಿ ತುಸು ಸಿಟ್ಟಿನಿಂದ. 'ಅಲ್ಲ, ಶಿಲೆಯ ಪುರುಷುನ್ನ ತಬ್ಬಿಕೊಂಡರೆ ಮಕ್ಕಳಾಗುತ್ತವೆ ಅನ್ನಂಗಿದ್ದರೆ, ರಕ್ತ ಮಾಂಸದ ಪುರುಷರೇಕೆ ಬೇಕು' – ಸಮುದ್ರದ ತೆರೆಯಂತೆ ಇದು ಅವಳ ಮನಸ್ಸಿಗೆ ಬಡಿದು ಹೋಗುತ್ತಿದೆ. ಕತ್ತಲಲ್ಲಿ ಕಪ್ಪು ಶಿಲೆ ಸುಮ್ಮನೆ ನಿಂತುಕೊಂಡಿರುವುದನ್ನು ದಿಟ್ಟಿಸಿದಳು. ಈ ತೊಯ್ದಾಟದಲ್ಲೇ ಅದನ್ನು ದಿಟ್ಟಿಸುತ್ತ ಕೈಗಳ ಅಗಲಿಸಿ ತಬ್ಬಿಕೊಂಡಳು. ಅವಳಿಗೆ ಆಶ್ಚರ್ಯ. ಶಿಲೆಯೇ ಇಲ್ಲ. ನಂಬುವುದಕ್ಕೇ ಆಗುತ್ತಿಲ್ಲ. ತನ್ನನ್ನು ತಾನೇ ತಬ್ಬಿಕೊಂಡಂತೆ ಅನ್ನಿಸಿತು ಅವಳಿಗೆ. ಮತ್ತೆ ಮರುಕ್ಷಣ ಏನೋ ಕಚ್ಚಿದ ಹಾಗೆ ಅನುಭವವಾಯಿತು. 'ಅಜ್ಜಿ ಏನೋ ಕಚ್ಚಿದಂಗೆ ಆಗೈತೆ ಎದೆಮೇಲೆ' ಎಂದಳು. 'ಸುಮ್ಕೆ ಕಾರ್ಯ ಮಾಡು ಮೌನವಾಗಿ, ಭಂಗ ಮಾಡಬೇಡ. ಮನಸಿನ ತುಂಬ ಆ ಆದಿಪುರುಷುನ್ನು ತುಂಬಿಕೊಂಡು ಕೇಳ್ಕಾ, ನೆರವೇರಿಸ್ತಾನೆ. ಸೀಮ್ಗೀಮೆ ಇರ್ಬೇಕು, ಅಲ್ಲಿನ್ನು ಯಾತ್ತು ಇದ್ದಾತು. ನಿನ್ಗೆ ಸಿಗಬೇಕಾಗಿರದ್ನ ಮನುಸ್ನಾಗೇ ಅಂದ್ಕಮ್ತು ಸುಮ್ಕೆ ಮಾತಾಡದೆ ಮಾಡು' ಅಜ್ಜಿ ಗಂಭೀರವಾದ ಧ್ವನಿಯಲ್ಲಿ ನುಡಿದಳು ಕತ್ತಲಲ್ಲಿ. ಅದನ್ನು ಹಾಗೆ ಮಾಡಿ ಈಚೆ ಬಂದಳು. ಅವಳ ಅತ್ತೆ ಹೊಸ ವಸ್ತ್ರಗಳನ್ನು ಕೊಟ್ಟಳು. ಎದೆಯನ್ನು ಮೇಲಿಂದ ಕೆಳಕ್ಕೆ ಸವರಿಕೊಂಡಳು. ಇರುವೆಗಳು ಮೈಯನ್ನು ಮುತ್ತಿವೆ. ಕೊಡವಿಕೊಂಡಳು. 'ಅಜ್ಜಿ ಸೀಮೆ' ಎಂದಳು. 'ಬಟ್ಟೆಗೆ ಎಲ್ಲ ಕೊಡಿವಿಕೋ ಅವುನ್ನ' ಎಂದಳು ಆ ಅಜ್ಜಿ. 'ಇನ್ನ ಸಿಂತೆ ಬೇಡ ಹೋಗು, ಎಲ್ಲ ಆಗುತ್ತೆ. ದೋಷೆಲ್ಲ ಮುಗೀತು ಇಲ್ಲಿಗೆ. ಇನ್ನು ಆರು ತಿಂಗಳಿಗೆ ನಿನ್ನ ಹೊಟ್ಟೆಗೆ ಒಂದು ಚಿಗುರು ಮೂಡುತ್ತೆ'